ಮೈಸೂರು ನಗರದ ಜನಸಂಖ್ಯೆಯ ಬಗ್ಗೆ

೯೬ (೨೫೨-೧) ಶ್ರೀಮತಿ ಮುಖ್ತಾರುನ್ನೀಸಾ (ನರಸಿಂಹರಾಜ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹಾಲಿ ಮೈಸೂರು ನಗರದ ಜನಸಂಖ್ಯೆ ಮತ್ತು ಈಗಿರುವ ವಾಸದ ಮನೆಗಳು ಎಷ್ಟು ?

ಆ) ಮೈಸೂರು ನಗರದ ಗಾತ್ರದ ಬೆಳವಣಿಗೆ ಮತ್ತು ಜನಸಂಖ್ಯೆ ದೇಶದ ಇತರ ಮುಖ್ಯ ನಗರಗಳಂತೆ ಬೆಳೆಯುತ್ತಿರುವುದು ನಿಜವಲ್ಲವೆ ?

ಇ) ಶೈಕ್ಷಣಿಕ ಸೌಲಭ್ಯಗಳು ಕ್ರೀಡೆ ಸಾಂಸ್ಕೃತಿಕ ಮತ್ತು ದಾರ್ಮಿಕ ಸಂಸ್ಥೆಗಳನ್ನೊಳಗೊಂಡ ಯೋಜಿತ ಅಭಿವೃದ್ಧಿಯು ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಬದಲಿಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರವೆಂಬ ಸಂಸ್ಥೆಯನ್ನು ಜಾರಿಗೆ ತರಲು ಸರ್ಕಾರವು ಯೋಚಿಸಿಲ್ಲವೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ರಚಿವರು).—

ಮೈಸೂರು ನಗರದ ಜನಸಂಖ್ಯೆ:

ಅ) ೧೯೮೧ರ ಜನಗಣತಿ ಪ್ರಕಾರ | ೪,೭೬,೪೪೬

ಆ) ೧೯೮೬ನೇಯ ಇಸವಿಯ ಮಧ್ಯ ವರ್ಷದ ಜನಸಂಖ್ಯೆ—೫,೫೩,೧೧೯

ಇ) ಹಾಲಿ ವಾಸದ ಮನೆಗಳು—೮೩,೦೮೪

ಅ) ಮೈಸೂರು ನಗರವು ತೀವ್ರವಾಗಿ ಬೆಳವಣಿಗೆಯಾಗುತ್ತಿದೆ ಮತ್ತು ಜನಸಂಖ್ಯೆಯೂ ಹೆಚ್ಚಾಗುತ್ತಿದೆ.

ಇ) ಹೌದು. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ನಿಪ್ಪಾಣಿ ನಗರಕ್ಕೆ ನೀರು ಸರಬರಾಜು ಅಭಿವೃದ್ಧಿ ಯೋಜನೆ ಬಗ್ಗೆ

೯೭ (೨೫೨) ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್ (ನಿಪ್ಪಾಣಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ನಿಪ್ಪಾಣಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಅಭಿವೃದ್ಧಿ ಯೋಜನೆ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮ ?

ಆ) ಯೋಜನೆಯ ಅಂದಾಜು ವೆಚ್ಚ ಎಷ್ಟು ?

ಇ) ಮೇಲಿನ ಯೋಜನೆಗೆ ಸಾಲ ಪಡೆಯಲು ಸರ್ಕಾರವು ಖಾತರಿ ನೀಡುವುದೇ ?

ಈ) ಸರ್ಕಾರವು ಈ ಯೋಜನೆಗೆ ಏನಾದರೂ ಆರ್ಥಿಕ ಸಹಾಯ ನೀಡುವುದೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಈ ಬಗ್ಗೆ ಪ್ರಸ್ತಾವನೆ ಸರ್ಕಾರಕ್ಕೆ ಇನ್ನೂ ಬಂದಿರುವುದಿಲ್ಲ. ಯೋಜನೆಯ ಬಗ್ಗೆ ಪ್ರಸ್ತಾವನೆ ಬಂದ ಕೂಡಲೇ ಪರಿಶೀಲಿಸಲಾಗುವುದು.

ಆ) ೧೯೮೬-೮೭ರ ದರಗಳ ಪ್ರಕಾರ ೨೮೦.೦೦ ಲಕ್ಷ ರೂ.ಗಳು ಅಂದಾಜು ಆಗಬಹುದೆಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ತಿಳಿಸಿದೆ.

ಇ) ಪ್ರಸ್ತಾವನೆ ಮಂಡಳಿಯಿಂದ ಬಂದ ನಂತರ ಪರಿಶೀಲಿಸಲಾಗುವುದು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಅಧ್ಯಕ್ಷರು.—ಮಂತ್ರಿಗಳು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ಮಂಡಿಸುವುದು.